ಜಮೀನುಗಳ ಸ್ವಾಧೀನ

103 (1718); ಶ್ರೀ ನಾಗರಾಜಯ್ಯ ಡಿ. (ಕುಣಿಗಲ್)

ಅ) ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿಯ ಸರ್ವೆ ನಂ. 22, 23 ಮತ್ತು 24 ರ ಜಮೀನುಗಳನ್ನು ಕೆ.ಐ.ಡಿ.ಬಿ. ಯವರು ಸ್ವಾಧೀನಪಡಿಸಿಕೊಂಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು);

ಇ) ಕೆ.ಐ.ಎ.ಡಿ.ಬಿ. ಯವರು ಕೈಗಾರಿಕೆಗಳಿಗಾಗಿ ಮಂಜೂರಾದ ಜಮೀನನ್ನು ಬೇರೆಯವರಿಗೆ ನಿಯಮ ಬಾಹಿರವಾಗಿ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಹೌದು.

ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿಯ ಸರ್ವೆ ನಂ. 21, 22, 23 ಮತ್ತು 24 ಸೇರಿದಂತೆ ಒಟ್ಟು 9 ಎಕರೆ 7 ಗುಂಟೆ ಜಮೀನನ್ನು (ಸರ್ಕಾರಿ ಖರಾಬು ಜಮೀನು ಸೇರಿ) ದಿನಾಂಕ: 12.08.1985 ರಂದು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ಕೆ.ಐ.ಎ.ಡಿ.ಬಿ. ಯು ಸದರಿ ಜಮೀನನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಕೈಗಾರಿಕಾ ವಸಾಹತು ಸ್ಥಾಪಿಸಲು ದಿನಾಂಕ 06.12.1985 ರಂದು ಹಂಚಿಕೆ ಮಾಡಿ, ದಿನಾಂಕ 24.10.1986 ರಂದು ಸ್ವಾಧೀನ ಪತ್ರ ನೀಡಲಾಗಿದೆ.

ಆನಂತರ ದಿನಾಂಕ 07.04.2010 ರಂದು ಕೆಎಸ್ಎಸ್ಐಡಿಸಿ ನಿಗಮದ ಪರವಾಗಿ 8 ಎಕರೆ 11 ಗುಂಟೆ ಜಮೀನಿಗೆ ಶುದ್ಧ ಕ್ರಯ ಪತ್ರವನ್ನು ನೆರವೇರಿಸಿ ಕೊಡಲಾಗಿದೆ. ನಿಗಮವು ಒಟ್ಟು 9 ಎಕರೆ 7 ಗುಂಟೆ ಜಮೀನಿನಲ್ಲಿ (ಸರ್ಕಾರಿ ಖರಾಬು ಜಮೀನು ಸೇರಿ) ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿರುತ್ತದೆ.

ಕೈಗಾರಿಕಾ ವಸಾಹತುವಿನಲ್ಲಿ 16 ಕೈಗಾರಿಕಾ ಮಳಿಗೆಗಳನ್ನು ನಿರ್ಮಿಸಿರುವುದರ ಜೊತೆಗೆ 30 ವಿವಿಧ ಮಾದರಿಯ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಿರುತ್ತದೆ. ಈ ಪೈಕಿ ಸ್ಪಷೆಲ್ ನಿವೇಶನ ಸಂಖ್ಯೆ 15 ಅನ್ನು ಫಾಸ್ಟ್ ಫುಡ್ ಅಂಡ್ ಕಾಂಡಿಮೆಂಟ್ಸ್ ಘಟಕಕ್ಕೆ ಹಂಚಿಕೆ ಮಾಡಲಾಗಿದ್ದು, ಹಂಚಿಕೆದಾರರಿಗೆ ಯಾವ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿದೆಯೋ, ಅದೇ ಉದ್ದೇಶಕ್ಕಾಗಿ ಹಂಚಿಕೆದಾರರು ಉಪಯೋಗಿಸುತ್ತಿದ್ದಾರೆ.

ಈ ಎಲ್ಲಾ ಹಂಚಿಕೆಗಳನ್ನು ತುಮಕೂರು ಜಿಲ್ಲೆ ಏಕಗವಾಕ್ಷಿ ಸಮಿತಿಯು ಮಾಡಿರುತ್ತದೆ.

ಇ) ಕೆ.ಐ.ಎ.ಡಿ.ಬಿ. ಯವರು ಬೇರೆಯವರಿಗೆ ಜಮೀನನ್ನು ಪರಭಾರೆ ಮಾಡಿರುವುದಿಲ್ಲ.

ಕೆ.ಎಸ್.ಎಸ್.ಐ.ಡಿ.ಸಿ. ಗೆ ಕೈಗಾರಿಕಾ ವಸಾಹತು ಸ್ಥಾಪಿಸಲು ನಿಯಮಾನುಸಾರ ಹಂಚಿಕೆ ಮಾಡಿ, ತದನಂತರ ಶುದ್ಧ ಕ್ರಯಪತ್ರ ನೀಡಲಾಗಿದೆ.

ಈ) ಅನ್ವಯಿಸುವುದಿಲ್ಲ.

ಅಧ್ಯಕ್ಷರು:– ರಾಜಾ ವೆಂಕಟಪ್ಪ ನಾಯಕ ಇಲ್ಲ, ಪ್ರತಾಪ ಗೌಡ ಪಾಟೀಲ್ ಇಲ್ಲ, ನಾಗರಾಜಯ್ಯ ಡಿ.

ಶ್ರೀ ಡಿ. ನಾಗರಾಜಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಏನು ಪ್ರಶ್ನೆ ಕೇಳಿದ್ದೇನೆ, ಆ ಪ್ರಶ್ನೆಗೆ ಸಂಬಂಧಪಟ್ಟಂತೆ ಸಮರ್ಪಕವಾದ ಉತ್ತರ ಬಂದಿಲ್ಲ. ಸರ್ವೆ ನಂಬರ್ 21, 22, 23, 24 ಯಾವಾಗ ಸ್ವಾಧೀನ ಪಡಿಸಿಕೊಳ್ಳಲಾಗಿದೆ? ಎಂದು ಕೇಳಿದ್ದೇನೆ. ಮುಗುಮ್ಮಾಗಿ ಅವರು ಸರ್ವೆ ನಂಬರ್‌ಗಳನ್ನು 1986ರಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು ಅವತ್ತು ಶಾಸಕನಾಗಿದ್ದೆ. ಸರ್ವೆ ನಂಬರ್ 21 ಅಕ್ವೈರ್ ಆಗಿರತಕ್ಕಂಥದ್ದು. 22, 23, 24 ಅಕ್ವೈರ್ ಆಗಿಲ್ಲ. 22, 23 ಎರಡು ಸರ್ವೆ ನಂಬರ್ Scheduled Caste ಗೆ ಸಂಬಂಧಪಟ್ಟಂತಹ ಒಬ್ಬರ ಜಮೀನು. ಸರ್ವೆ ನಂಬರ್ 21 ರ ಪಕ್ಕದಲ್ಲಿದೆ. ಅದರ ಪಕ್ಕದಲ್ಲಿರತಕ್ಕಂಥದ್ದು ಸರ್ವೆ ನಂಬರ್ 24. 1989–90 ರಲ್ಲಿ ಒಂದು scheduled caste management ನ ಖಾಸಗಿ ಕಾಲೇಜಿಗೆ 49,000 ರೂ. ಕಿಮ್ಮತ್ತಿನಲ್ಲಿ ಆ ಜಮೀನನ್ನು ಕೊಟ್ಟಿದ್ದಾರೆ. ಆ ಜಮೀನು ಇವತ್ತಿಗೂ ಆ ಕಾಲೇಜಿನ ಒಡೆತನದಲ್ಲಿದೆ. 2010 ರಲ್ಲಿ KIADB ಗೆ ಜಮೀನನ್ನು handover ಮಾಡುವಂತಹ ಸಂದರ್ಭದಲ್ಲಿ ಸರ್ವೆ ನಂಬರ್ 22, 23, 24 ಅನ್ನು KIADB ಯಿಂದ small scale industries ಗೆ handover ಆಗಿದೆ. Small scale industries ಗೆ handover ಆಗಬೇಕಾದರೆ, ಸರ್ವೆ ನಂಬರ್ 24 ಅಷ್ಟರಲ್ಲಿ ಆಗಲೇ ಬೇರೆ ಕಾಲೇಜಿಗೆ ಕೊಟ್ಟಿರತಕ್ಕಂತಹ ಜಮೀನನ್ನು ನಮಗೆ ಅಕ್ವೈರ್ ಆಗಿದೆ, ಸರ್ಕಾರಿ ಖರಾಬು ನಮ್ಮದು ಎಂದು ಹೇಳಿ ಇವರು ತೆಗೆದುಕೊಂಡು ಹೋಗಿ ಬೇರೆಯವರ ಜಮೀನನ್ನು KIADB ನವರಿಗೆ ಕೊಟ್ಟು KIADB ಯವರು ಅದನ್ನು ಬೇರೆಯವರಿಗೆ ಪರಭಾರೆ ಮಾಡಿರತಕ್ಕಂಥದ್ದು, ಇದು ಅಕ್ವಿಸಿಷನ್ ಆಗದೆ ಇರುವ ಜಮೀನನ್ನು ಬೇರೆಯವರ ಜಮೀನನ್ನು KIADB ಯವರು KSSIDC ನವರಿಗೆ ಕೊಟ್ಟು ಇಲ್ಲಿ ತಪ್ಪು ಮಾಡಿದ್ದಾರೆ, ಇವತ್ತು ಆ ಕಾಲೇಜಿನ ಬಿಲ್ಡಿಂಗ್ ಕಟ್ಟುವುದಕ್ಕೂ ಆಗುತ್ತಿಲ್ಲ, ಬೇರೆಯವರಿಗೆ ರಿಜಿಸ್ಟರ್ ಮಾಡಿದ್ದಾರೆ. ಇದನ್ನು ಸರಿಪಡಿಸಿ

ಕೊಡಬೇಕೆಂದು ಅಧ್ಯಕ್ಷರ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಅವರು ಕೇಳಿರತಕ್ಕಂತಹ ಪ್ರಶ್ನೆ ಸರ್ವೆ ನಂಬರ್ 22, 23, 24 ಜಮೀನುಗಳು ಸ್ವಾಧೀನ ಪಡಿಸಿಕೊಂಡಿರುವುದು ನಿಜವೇ? ಎಂದು ಕೇಳಿದ್ದಾರೆ. 'ಹೌದು' ಎಂದು ಹೇಳಿದ್ದೇನೆ. ಅದನ್ನು ಯಾವಾಗ ಅಕ್ವೈರ್ ಮಾಡಿಕೊಂಡಿರುವುದು ಎಂಬುದನ್ನು ಕೂಡ ಹೇಳಿದ್ದೇನೆ. 12.08.1985 ಅದಾದ ಮೇಲೆ ಮುಂದಿನ ಪ್ರಶ್ನೆ ಏನು ಕೇಳಿದ್ದಾರೆ ಹಾಗಿದ್ದಲ್ಲಿ ಈ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ? ಎಂದು ಕೇಳಿದ್ದಾರೆ. ಅದಕ್ಕೂ ಉತ್ತರ ಕೊಟ್ಟು ಆಗಿದೆ. ಮೂರನೇ ಪ್ರಶ್ನೆ ನೀವು ಕೇಳಿರುವುದು KIADB ಯವರು ಕೈಗಾರಿಕೆಗಳಿಗಾಗಿ ಮಂಜೂರಾದ ಜಮೀನನ್ನು ಬೇರೆಯವರಿಗೆ ನಿಯಮಬಾಹಿರವಾಗಿ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿಲ್ಲ, ಆ ತರಹದ್ದು ಮಾಡಿಲ್ಲವೆಂದು ಹೇಳಿದ್ದೇನೆ. ಹಾಗಿದ್ದರೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? ಎಂದು ಕೇಳಿದ್ದಾರೆ 'ಉದ್ಭವಿಸುವುದಿಲ್ಲ'ವೆಂದು ಉತ್ತರ ಕೊಟ್ಟಿದ್ದೇನೆ. ನೀವು ಹೇಳತಕ್ಕಂಥದ್ದಕ್ಕೂ ಇದಕ್ಕೂ ಸಂಬಂಧ ಇಲ್ಲ. 9 ಎಕರೆ 7 ಗುಂಟೆ ಜಮೀನನ್ನು ಈ 22, 23, 24 ಸರ್ವೆ ನಂಬರ್‌ಗಳಲ್ಲಿ ಕಸಬಾ ಹೋಬಳಿ ಕುಣಿಗಲ್ ತಾಲ್ಲೂಕಿನಲ್ಲಿ ಅಕ್ವೈರ್ ಮಾಡಿಕೊಂಡಿದ್ದೇವೆ. ಇದನ್ನು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ ಸೇಲ್ ಡೀಡ್ ಮಾಡಿ ಅವರಿಗೆ ಕೊಟ್ಟಿದ್ದಾರೆ. ಅವರು plot ಗಳನ್ನು ಮಾಡಿ ಕೈಗಾರಿಕೆ ಮಾಡುವವರಿಗೆ ಹಂಚಿದ್ದಾರೆ. ಅವರು ಎಷ್ಟು ಮಾಡಿದ್ದಾರೆ ಎಂದರೆ absolute sale deed has been executed in favour of KSSIDC for 8 acres 11 guntas on 07.04.2010 by KIADB. ಅವರು KSSIDC ಯವರು 16 ಶೆಡ್‌ಗಳನ್ನು ಮಾಡಿದ್ದಾರೆ, 30 industrial plot ಗಳನ್ನು ಮಾಡಿದ್ದಾರೆ. ಅದರಲ್ಲಿ 15 ನೇ ನಂಬರಿಗೆ ಮಾತ್ರ ಅದರಲ್ಲಿ ಒಂದು fast food and condiments unit

ಮಾಡುವುದಕ್ಕೆ ಅಲ್ಲಿ ಒಂದು ಹೋಟೆಲ್ ಮಾಡುವುದಕ್ಕೆ ಕೊಟ್ಟಿದ್ದಾರೆ. ಇದು ಬಿಟ್ಟರೆ ಬೇರೆ ಇನ್ಯಾರಿಗೂ ಕೊಟ್ಟಿರತಕ್ಕಂಥದ್ದು ಇಲ್ಲ.

ಶ್ರೀ ಡಿ. ನಾಗರಾಜಯ್ಯ:– ನನ್ನ ಪ್ರಶ್ನೆ ಇರತಕ್ಕಂಥದ್ದು, ಸರ್ವೆ ನಂಬರ್ 21 ಅಕ್ವೈರ್ ಆಗಿರತಕ್ಕಂಥದ್ದು ನಿಜ. ಸರ್ವೆ ನಂಬರ್ 22 ಅಕ್ವೈರ್ ಆಗಿಲ್ಲ, 23 ಅಕ್ವೈರ್ ಆಗಿಲ್ಲ. ಅದು scheduled caste ನವರ ಎರಡು ಕುಟುಂಬ ಜಮೀನು ಅದು.

ಅಧ್ಯಕ್ಷರು:– ಯಾರಿಗಾದರೂ ಸೇರಿರಲಿ, ಅಕ್ವೈರ್ ಆಗಿದೆಯೇ ಇಲ್ಲವೋ?

ಶ್ರೀ ಡಿ. ನಾಗರಾಜಯ್ಯ:– ಅಕ್ವೈರ್ ಆಗಿಲ್ಲ. ಸರ್ವೆ ನಂಬರ್ 24 ಸರ್ಕಾರಿ ಖರಾಬು, ಯಾವತ್ತು ಸ್ವಾಧೀನ ಪಡಿಸಿಕೊಂಡಿದ್ದಾರೆ? ಯಾರಿಂದ ಸ್ವಾಧೀನ ಪಡಿಸಿಕೊಂಡಿದ್ದಾರೆ? Acquisition ಮುಖಾಂತರ ಮಾಡಿಕೊಂಡಿದ್ದಾರಾ?

ಶ್ರೀ ಸಿದ್ದರಾಮಯ್ಯ:– ಅದರಲ್ಲಿ ಸರ್ಕಾರಿ ಖರಾಬೂ ಇದೆ. 9 ಎಕರೆ 7 ಗುಂಟೆಯಲ್ಲಿ ಸರ್ಕಾರಿ ಖರಾಬು ಇದೆ, ಖಾಸಗಿಯವರದು 8 ಎಕರೆ 11 ಗುಂಟೆ ಮಾತ್ರ. ಇನ್ನು ಉಳಿದದ್ದು ಸರ್ಕಾರಿ ಖರಾಬು.

ಶ್ರೀ ಡಿ. ನಾಗರಾಜಯ್ಯ:– ನನ್ನ ಪಾಯಿಂಟ್ ಅರ್ಥ ಮಾಡಿಕೊಳ್ಳಿ. ಸರ್ವೆ ನಂಬರ್ 24, ಸ್ವಾಮಿ ಪದವಿ ಪೂರ್ವ ಕಾಲೇಜಿಗೆ 1989–90 ರಲ್ಲಿ ಅದನ್ನು ಕಿಮ್ಮತ್ತು ಕಟ್ಟಿಸಿಕೊಂಡು ಸರ್ಕಾರ ಆ ಕಾಲೇಜಿಗೆ ಕೊಟ್ಟಿರತಕ್ಕಂತಹ ಜಮೀನು. ಜಿಲ್ಲಾಧಿಕಾರಿಗಳು 1989–90 ರಲ್ಲಿ ಸ್ವಾಮಿ ಪದವಿ ಪೂರ್ವ ಕಾಲೇಜಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು:– ನಾಗರಾಜಯ್ಯನವರೆ, ಜಿಲ್ಲಾಧಿಕಾರಿಗಳು ಕೊಟ್ಟರೂ ಕೂಡ industry ಗೆಂದು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ, ಅದನ್ನು ಮಾಡಿದ್ದಾರೆ. ನೋಟಿಫಿಕೇಷನ್ ಆಗಿದೆ, ಅಕ್ವೈರ್ ಆಗಿದೆ, ಆ ಸಂದರ್ಭದಲ್ಲಿಯೇ ನೀವು objection ಹಾಕಿದ್ದರೆ ನಿಲ್ಲಿಸುತ್ತಿದ್ದರು.

ಶ್ರೀ ಡಿ. ನಾಗರಾಜಯ್ಯ:– ಅಕ್ವೈರ್ ಆಗಿಲ್ಲ, ನೋಟಿಫಿಕೇಷನ್ ಆಗಿಲ್ಲ,

ಅಧ್ಯಕ್ಷರು:– ಹೇಗೆ ಹೇಳುತ್ತೀರಿ?

ಶ್ರೀ ಸಿದ್ದರಾಮಯ್ಯ:– ಅಕ್ವೈರ್ ಆಗಿದೆ. KIADB Act ನಲ್ಲಿ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ, ಅಕ್ವೈರ್ ಮಾಡಿಕೊಂಡಿದ್ದಾರೆ. ಡಿ.ಸಿ. ಕೊಟ್ಟಿರಬಹುದು, ಆದರೆ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. KIADB Act ನಲ್ಲಿ KIADB ಗೆ ಅಧಿಕಾರ ಇದೆ.

ಶ್ರೀ ಡಿ. ನಾಗರಾಜಯ್ಯ:– ಮಾನ್ಯ ಮುಖ್ಯ ಮಂತ್ರಿಗಳೆ, ನಾನು ಅಧಿಕಾರ ಇಲ್ಲವೆಂದು ಹೇಳುತ್ತಿಲ್ಲ, ನನ್ನ ಹತ್ತಿರ ನೀವು ಕೊಟ್ಟಿರತಕ್ಕಂತಹ ಉತ್ತರ ಇದೆ. ನಾಳೆ ಬೆಳಿಗ್ಗೆ ಬೇಕಾದರೆ ನಾನು ಎಲ್ಲಾ ಮಾಹಿತಿ ತರಿಸಿಕೊಡುತ್ತೇನೆ.

ಅಧ್ಯಕ್ಷರು:– ಈಗ ಲೇಟಾಗಿ ಹೋಗಿದೆ ಬಿಡಿ, ಬೆಳಿಗ್ಗೆ ಕಳುಹಿಸಿ ಕೊಡಿ.

ಶ್ರೀ ಡಿ. ನಾಗರಾಜಯ್ಯ:– ಸರ್ವೆ ನಂಬರ್ 24 ಅಕ್ವೈರ್ ಆಗಿಲ್ಲ, ನೋಟಿಫಿಕೇಷನ್ ಆಗಿಲ್ಲ,

ಶ್ರೀ ಸಿದ್ದರಾಮಯ್ಯ:– ನಿಮ್ಮ ಹತ್ತಿರ ಏನು ಮಾಹಿತಿ ಇದೆ, ಅದನ್ನು ಕಳುಹಿಸಿ ಕೊಡಿ. ನಾನು ಅದನ್ನು ಕೂಲಂಕಷವಾಗಿ ನೋಡಿ, ನಿಮ್ಮ ಜೊತೆ ಚರ್ಚೆ ಮಾಡುತ್ತೇನೆ.

ಶ್ರೀ ಡಿ. ನಾಗರಾಜಯ್ಯ:– ಸದನಕ್ಕೆ ನಿಮ್ಮ ಅಧಿಕಾರಿಗಳು ಈ ತರಹ ತಪ್ಪು ಉತ್ತರ ಕೊಡುತ್ತಿದ್ದಾರೆ. ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎನ್ನುವುದು ನನ್ನ ಭಾವನೆಯಾಗಿದೆ.

ಅಧ್ಯಕ್ಷರು:– ದಾಖಲೆ ಇದ್ದರೆ ಈಗಲೇ ಕೊಡಿ. ಅಕ್ವೈರ್ ಆಗಿದ್ದಕ್ಕೆ ನೋಟಿಫಿಕೇಷನ್ ಆಗಿದೆಯೇ?

ಶ್ರೀ ಡಿ. ನಾಗರಾಜಯ್ಯ:– ಆಗಿಲ್ಲ.

ಅಧ್ಯಕ್ಷರು:– ನನಗೇನೂ ಅರ್ಥವಾಗುತ್ತಿಲ್ಲ.

ಶ್ರೀ ಡಿ. ನಾಗರಾಜಯ್ಯ:– ಸೋಮವಾರ ಮಾಹಿತಿ ಕೊಡುತ್ತೇನೆ.

ಅಧ್ಯಕ್ಷರು:– ಆಯಿತು ಕೊಡಿ. ಸುನಿಲ್ ಕುಮಾರ್.

ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವವರು

104 (2358); ಶ್ರೀ ಸುನಿಲ್‌ಕುಮಾರ್ ವಿ. (ಕಾರ್ಕಳ)

ಅ) ರಾಜ್ಯದಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಕೆ.ಎಫ್.ಡಿ. ಮತ್ತು ಪಿ.ಎಫ್.ಐ. ಸಂಘಟನೆಯ ಕಾರ್ಯಕರ್ತರ ಮೇಲಿನ ಕ್ರಿಮಿನಲ್ ಮೊಕದ್ದಮೆಗಳನ್ನು ಸರ್ಕಾರ ವಾಪಸ್ಸು ಪಡೆಯಲು ಕಾರಣವೇನು;

ಆ) ಹಾಗಿದ್ದಲ್ಲಿ, ಸದರಿ ಮೊಕದ್ದಮೆಗಳನ್ನು ವಾಪಸ್ಸು ಪಡೆಯುವಲ್ಲಿ ಸ್ಥಳೀಯ ಠಾಣೆ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಯವರು ಒಪ್ಪಿಗೆ ಸೂಚಿಸಿರುತ್ತಾರೆಯೇ; (ನಡಾವಳಿ ಪ್ರತಿ ಒದಗಿಸುವುದು)

ಇ) ಸದರಿ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಒಪ್ಪಿಗೆ ಪಡೆಯಲಾಗಿದೆಯೇ? (ನಡಾವಳಿ ಪ್ರತಿ ಒದಗಿಸುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಅಭಿಯೋಜನೆಯಿಂದ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಲ್ಲಿ, ಸದರಿ ಮೊಕದ್ದಮೆಗಳನ್ನು ಹಿಂಪಡೆಯುವ ಕುರಿತು ನಿಯಮಾನುಸಾರ ಪರಿಶೀಲಿಸಲಾಗುತ್ತದೆ. ಈ ಪ್ರಕ್ರಿಯೆ ಈ ಹಿಂದಿನಿಂದಲೂ ನಡೆದು ಬಂದಿದೆ.

2009 ರಲ್ಲಿ ಮೈಸೂರಿನಲ್ಲಿ ನಡೆದ ಕೋಮುಗಲಭೆ ಹಾಗೂ 2010 ರಲ್ಲಿ ಶಿವಮೊಗ್ಗ ಹಾಗೂ ಹಾಸನದಲ್ಲಿ ನಡೆದ ಗಲಭೆಯಲ್ಲಿ ಪಾಲ್ಗೊಂಡಿದ್ದವರ ಮೇಲಿನ (ಹಿಂದೂಗಳು ಹಾಗೂ ಮುಸಲ್ಮಾನರು) ಮೊಕದ್ದಮೆಗಳನ್ನು ಹಿಂಪಡೆಯಲು ಸಚಿವ ಸಂಪುಟವು ತೀರ್ಮಾನಿಸಿದೆ.